ಅಳವಡಿಸುವಂಥ ವ್ಯವಸ್ಥೆ ಆಗಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಮೃತರ ಕುಟುಂಬವರ್ಗದವರೆಲ್ಲರಿಗೂ ನಮ್ಮೆಲ್ಲರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ನಿಧನ ಹೊಂದಿದವರ ಮೃತರ ಆತ್ಮಕ್ಕೆ ಶಾಂತಿಯನ್ನು ಕೊಡಲು ಮಾನ್ಯ ಸದಸ್ಯರು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಎದ್ದುನಿಂತು ಮೃತರ ಸ್ಮರಣಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ವರ್ಷದಲ್ಲಿ ನೂರು ದಿನಗಳ ಕಾಲ ಸಭೆಯನ್ನು ನಡೆಸುವುದು

ಅಧ್ಯಕ್ಷರು : ಇನ್ನು ಇವತ್ತು ಬೆಳಿಗ್ಗೆ ಸಾಕಷ್ಟು ಮಾನ್ಯ ಸದಸ್ಯರುಗಳು ಬಂದು ನನಗೆ ಭೇಟಿಯಾಗಿ ನಾಳೆ ದಿವಸದ ಕಾರ್ಯಕಲಾಪದ ಬಗ್ಗೆ ರಜೆಯನ್ನು ಕೊಟ್ಟು ಪುನಃ ಸೋಮವಾರ ಕೂಡೋಣವೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ, ಇಲ್ಲ, ನಾವು ಯಾರೂ ಅದಕ್ಕೆ ಒಪ್ಪಿಲ್ಲ. ಬಹಳ ಮುಖ್ಯವಾದ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಯಾವ ಕಾರಣಕ್ಕೂ ಸಭೆಯನ್ನು ಮುಂದೂಡಬಾರದು. ಸಭೆಯನ್ನು ಶನಿವಾರ ಸಹ ನಡೆಸಬೇಕೆಂದು ಹೇಳುವವರು ನಾವು.

ಶ್ರೀ ಕೆ.ಎಸ್. ಈಶ್ವರಪ್ಪ : ಸಭೆಯನ್ನು ಈಗ ಕರೆದಿರುವುದು 12 ದಿವಸಕ್ಕೆ ದಯವಿಟ್ಟು ಸಭೆ ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕು. ಇಡೀ ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಬೇಕೇ ಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದ ಮೇಲೆ ವಿಧಾನ ಸಭೆಯಲ್ಲಿ ಹೊಸ ಸಂಪ್ರದಾಯವನ್ನು ಹಾಕುತ್ತೇವೆಂದು ಹೇಳಿದ್ದರು. ಅದೇನೆಂದರೆ, ವರ್ಷದಲ್ಲಿ ಕನಿಷ್ಟ ಒಂದು ನೂರು ದಿವಸಗಳ ಕಾಲ ಈ ಸಭೆಯ ನಡವಳಿಕೆಯನ್ನು ನಡೆಸುತ್ತೇವೆನ್ನತಕ್ಕ ಆಶ್ವಾಸನೆಯನ್ನು ಸದನದಲ್ಲಿಯೂ ಕೊಟ್ಟಿದ್ದಾರೆ, ಹೊರಗಡೆಯೂ ಕೊಟ್ಟಿದ್ದಾರೆ. ಆದರೆ ಈ ವರ್ಷದಲ್ಲಿ ಲೆಕ್ಕಹಾಕಿದರೆ 40-45 ದಿವಸ ಸಭೆ ನಡೆದಿರಬಹುದು. 12 ದಿವಸಗಳ ಸಭೆಯನ್ನು ಇವತ್ತಿನ ದಿವಸ ಕರೆದಿದ್ದಾರೆ. ಅದರಲ್ಲಿ ಈಗಾಗಲೇ ಒಂದು ದಿವಸವನ್ನು ಮೋಟಕು ಮಾಡಬೇಕೆಂದರೆ ಸಭೆ ಕರೆಯುವುದೇ ಬೇಡ. ಸಭೆ ಕರೆಯುವ ಅವಶ್ಯಕತೆ ಏನಿದೆ? ಸರ್ಕಾರ ಬಹಳ ಸುಭದ್ರವಾಗಿದೆ, ಭದ್ರವಾಗಿದೆ, ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ಕೇಳಿದ್ದನ್ನೆಲ್ಲ ಕೊಡುತ್ತಿದ್ದಾರೆ. ರಾಜ್ಯದಲ್ಲಿ ಸಮೃದ್ಧಿ ಅನ್ನುವುದು ತುಂಬಿ ತುಳುಕಾಡುತ್ತಿದೆ. ಹಣದ ಹೊಳೆ ಇವತ್ತಿನ ದಿವಸ ಹರಿಯುತ್ತಿದೆ. ಇವರ ಆಡಳಿತ ಬಹಳ ದಕ್ಷವಾಗಿದೆ. ಆದ್ದರಿಂದ ವಿಧಾನ ಸಭೆಯನ್ನು ಕರೆದು ಇವತ್ತಿನ ದಿವಸ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ, ಅವರು ಆಡಳಿತವನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಆದ್ದರಿಂದ ಸಭೆಯನ್ನು ಕರೆಯುವುದೇ ಬೇಡ, ಅದರ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವತ್ತು ಡಿಸೆಂಬರ್ 30ನೇ ತಾರೀಖು, ನಾವು ಸಭೆ ಸೇರುತ್ತಿದ್ದೇವೆ. ಸಾಮಾನ್ಯವಾಗಿ ಈ ಸಭೆ ಜನವರಿ ಮೊದಲನೆಯವಾರ ಜಂಟಿ ಅಧಿವೇಶನ ಸೇರಬೇಕಾಗಿತ್ತು. ಇದು ಒಂದು ಹಳೆಯ ಸಂಪ್ರದಾಯವಾಗಿದೆ. ಯಾವುದೋ ಒಂದು ಓಬಿರಾಯನ ಕಾಲದ ಹಳೆಯ ಕಾಲದ

ಸಂಪ್ರದಾಯವಾಗಿದೆ. ಮತ್ತು ನೂರು ದಿನಗಳ ಸಭೆಯನ್ನು ನಡೆಸುತ್ತೇವೆಂದು ಹಿಂದೆ ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನೆಲ್ಲ ಸಭೆಗೆ ಕರೆದಾಗ ತುರ್ತು ಶಾಸನ ಸಭೆಯನ್ನು ಕರೆಯಿರಿ ಎಂದು ನಾನು ಸ್ಪಷ್ಟವಾಗಿ ಒತ್ತಾಯ ಮಾಡಿದ್ದೆ. ಆ ಸಂದರ್ಭದಲ್ಲಿ ಚುನಾವಣೆ ಇದೆ, 30ನೇ ತಾರೀಖು ಸಭೆಯನ್ನು ಕರೆಯೋಣ ಎಂದು ಹೇಳಿದರು. ನನಗನ್ನಿಸುತ್ತದೆ, ಈಗ ಇರತಕ್ಕ 12 ದಿವಸಗಳಲ್ಲಿ 3 ದಿವಸ ರಜಾ ಇದೆ. ಇನ್ನು ನಮಗೆ ಸಿಗತಕ್ಕಂಥದ್ದು 9 ದಿವಸ. ನಾಳೆ ಸಭೆಯನ್ನು ಮುಂದಕ್ಕೆ ಹಾಕಿ ಸೋಮವಾರ ನಡೆಸುವುದಾದರೆ ಈ ಸಭೆಯನ್ನು 12 ದಿವಸದ ಬದಲು ಇನ್ನು 3 ದಿವಸ ಮುಂದಕ್ಕೆ ನಡೆಸುತ್ತೀರಾ ಎನ್ನುವುದು ತೀರ್ಮಾನವಾಗಬೇಕಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನವನ್ನು ಮುಂದೂಡಿ ಎಂದು ಹೇಳಿದ ಮಹಾನುಭಾವರ ಹೆಸರುಗಳನ್ನು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಸದನದಲ್ಲಿ ಅನೇಕ ಸಮಸ್ಯೆಗಳು ಚರ್ಚೆಯಾಗಬೇಕಾಗಿದೆ. ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಏನೆಂದರೆ ಮುಖ್ಯಮಂತ್ರಿಗಳು ವರ್ಷದಲ್ಲಿ ಕನಿಷ್ಠ ನೂರು ದಿವಸಗಳ ಕಾಲವಾದರೂ ಸದನವನ್ನು ನಡೆಸುತ್ತೇವೆ ಎನ್ನತಕ್ಕಂಥ ಪ್ರಾಮಾಣಿಕವಾದಂಥ ಭರವಸೆ ಕೊಟ್ಟಿದ್ದಾರೆ. ಆ ಭರವಸೆಗೆ ಮಾನ್ಯ ಮುಖ್ಯಮಂತ್ರಿಗಳು ಕಟ್ಟುಬಿದ್ದಿದ್ದಾರೋ ಇಲ್ಲವೋ ಅನ್ನುವುದು ನಮಗೆ ತಿಳಿಯಬೇಕು. ಈಗ ಕರೆದಿರುವುದು ಮೂರು ದಿವಸಗಳ ಸದನವೆಂದು ಮಾನ್ಯ ಸದಸ್ಯರಾದ ಶ್ರೀ ಡಿ.ಬಿ. ಚಂದ್ರೇಗೌಡರು ಹೇಳುತ್ತಿದ್ದಾರೆ. ಆದುದರಿಂದ, ಈ ಕುರಿತು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಕಳೆದ ಭಾರಿ ಕರೆಯಲಾಗಿದ್ದ ಅಧಿವೇಶನ ಹಠಾತ್ ಮುಂದಕ್ಕೆ ಹೋಗಿರುವುದು ತಮಗೆ ಗೊತ್ತಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಜ್ವಲಂತ ಸಮಸ್ಯೆಗಳಿದ್ದು ಅವುಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಈ ಮಧ್ಯದಲ್ಲಿ ಇಡೀ ರಾಜ್ಯಾದ್ಯಂತ ಸಮಸ್ಯೆಗಳ ಸರಮಾಲೆಯಾಗಿದ್ದು, ಇಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಪ್ರತಿನಿತ್ಯವೂ ಅಶ್ವಾಸನೆಗಳ ಸುರಿಮಳೆಯಾಗುತ್ತಿದೆ. ಸರ್ಕಾರ ಬದುಕಿದೆಯೇ? ಸತ್ತಿದೆಯೇ? ಎಂಬ ಸ್ಥಿತಿ ಇರಬೇಕಾದರೆ ಇವೆಲ್ಲದರ ಬಗ್ಗೆ ಚರ್ಚೆಯಾಗಬೇಕಾಗಿರುವುದರಿಂದ, ದಯವಿಟ್ಟು ಯಾವುದೇ ಕಾರಣಕ್ಕಾಗಿ ಸದನವನ್ನು ಮುಂದೆ ಹಾಕುವುದಕ್ಕೆ ಅವಕಾಶ ಕೊಡಬೇಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುತ್ತಾ, ಈ ಸದನವನ್ನು ಸೋಮವಾರಕ್ಕೆ ಮುಂದೂಡುವುದರ ಬಗ್ಗೆ ಏನು ಹತ್ತು ದಿವಸಗಳ ಕಾರ್ಯಕ್ರಮವನ್ನು ಈಗಾಗಲೇ ಪ್ರಕಟಿಸಿದ್ದೇವೆ, ಅದನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ.....

ಶ್ರೀ ವಾಟಾಳ್ ನಾಗರಾಜ್ : ತಾವು ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಿದ್ದೀರಾ?

ಶ್ರೀ ಎಸ್.ಎಂ. ಕೃಷ್ಣ : ನಾನು ಯಾರ ಪರವಾಗಿಯೂ ಉತ್ತರ ಕೊಡುತ್ತಿಲ್ಲ. ನಾವು ಯೋಚನೆ ಮಾಡಿರುವುದೇನೆಂದರೆ, ನಿನ್ನೆ ದಿವಸ ಗ್ರಾಮ ಪಂಚಾಯಿತಿ ಚುನಾವಣೆ ನಡೆದಿದೆ ನಾಡಿದ್ದು ಶನಿವಾರ ಹಾಗೂ ಭಾನುವಾರಗಳಂದು ಸದನಕ್ಕೆ ರಜೆ ಇದೆ. ಹೊಸ ವರ್ಷ ಪ್ರಾರಂಭವಾಗುತ್ತಿದೆ. ಅದರ ಬಗ್ಗೆ ಕಾಳಜಿ ಬೇಡ. ಆದುದರಿಂದ, ಸದನದ ಕಾಲಾವಧಿಯನ್ನು ಮೊಟಕುಗೊಳಿಸುವಂಥ ಉದ್ದೇಶ ಸರ್ಕಾರಕ್ಕಿಲ್ಲ. ಒಂದು ದಿವಸ ಹೋದರೆ ಒಂದು ದಿವಸ ಜಾಸ್ತಿ ಸದನದ ಅವಧಿ ವಿಸ್ತರಿಸಿದರಾಯಿತು, 2-3 ದಿವಸಗಳು ಹೋದರೆ 2-3 ದಿವಸಗಳು ಜಾಸ್ತಿ ಕಾಲಾವಧಿಯನ್ನು ವಿಸ್ತರಿಸಿದರಾಯಿತು. ಈ ಬಗ್ಗೆ ಸರ್ಕಾರ ಮುಕ್ತ ಮನಸ್ಸು ಹೊಂದಿದೆ. ಆದ್ದರಿಂದ ತಾವು ಈ ಸಭೆಯ

ಒಟ್ಟಾರೆ ನಿರ್ಧಾರವನ್ನು ಗ್ರಹಿಸಿ ಹೀಗೆ ಮಾಡಿದ್ದೀರಿ. ನಾಳೆ ದಿವಸ ಸದನ ಸೇರಲೇಬೇಕೆಂದರೆ ನಮ್ಮದೇನೂ ಅಭ್ಯಂತರವಿಲ್ಲ, ಧಾರಾಳವಾಗಿ ಸೇರೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯ ಹೇಳುತ್ತಿದ್ದಾರೆ. ಆದರೆ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವುದು ಸರ್ಕಾರಕ್ಕೆ ಗೊತ್ತಿತ್ತು, ಅದರ ಚುನಾವಣಾ ಫಲಿತಾಂಶ ಬರುತ್ತದೆಂಬುದೂ ಗೊತ್ತಿತ್ತು, ಚುನಾವಣಾ ಫಲಿತಾಂಶ ಬರುವ ಸಮಯದಲ್ಲಿ ಚುನಾಯಿತ ಪ್ರತಿನಿಧಿಗಳಾದ ಶಾಸಕರುಗಳು ಅಲ್ಲಿರಬೇಕೆಂಬುದೂ ಸಹ ಗೊತ್ತಿತ್ತು. ಇಷ್ಟಾದರೂ ಸಹ ಇಂದು ಅಧಿವೇಶನ ಕರೆದು ಸಂಚು ಮಾಡಿ ಮುಂದಕ್ಕೆ ಹಾಕುವಂಥ ಷಡ್ಯಂತರವೇನಿತ್ತು? ಇದರ ಬಗ್ಗೆ ಜನರು ಅನುಮಾನ ಪಡುವಂಥ ಪರಿಸ್ಥಿತಿ ಇದೆ. ಅವರು ಹೇಳಿದ ಹಾಗೆ ಚುನಾವಣೆ ಮುಗಿಸಿದೆ. ಚುನಾವಣೆಗೆ ನಿಂತಿರುವವರ ಹಣೆಬರಹ ಏನೆಂದು ಗೊತ್ತಾಗುತ್ತಿದೆ. ಗ್ರಾಮ ಪಂಚಾಯಿತಿಗಳ ಚುನಾವಣಾ ಕಾರ್ಯ ಮುಗಿದಿದ್ದು ಅದರ ಎಣಿಕೆ ಕೆಲಸ ನಡೆಯುತ್ತಿದೆ. ಆದುದರಿಂದ, ಈ ಸಂದರ್ಭದಲ್ಲಿ ಗೊಂದಲ ಸೃಷ್ಟಿಯಾಗಿ ಜನರೆಲ್ಲರೂ ಸರ್ಕಾರವನ್ನು ಅಪನಂಬಿಕೆಯಿಂದ ನೋಡುವಂಥ ಪರಿಸ್ಥಿತಿ ಬೇಡ. ಈ ಸದನ ಶನಿವಾರವೂ ನಡೆಯಬೇಕು. ಜನರ ಸಮಸ್ಯೆಗಳು ಸದನದಲ್ಲಿ ಚರ್ಚೆಯಾಗದೆ ಜನರು ಕಣ್ಣೀರು ಹಾಕುತ್ತಿರುವಂಥ ಸಂದರ್ಭದಲ್ಲಿ ಸದನವನ್ನು ಮುಂದೂಡಬೇಕೆಂದು ಹೇಳುವಂಥ ಸ್ಥಿತಿಗೆ ಸರ್ಕಾರ ಬಂದಿದೆಯೆಂದರೆ, ಸರ್ಕಾರದಲ್ಲೇನಾದರೂ ಗೊಂದಲ ಇನ್ನೂ ಜಾಸ್ತಿಯಾಗಿದೆಯೇ? ಅಥವಾ ಸರ್ಕಾರವೇನಾದರೂ ಸಂಕಷ್ಟದಲ್ಲಿ ಸಿಲುಕಿಕೊಂಡಿದೆಯೇ? ಅದಕ್ಕೋಸ್ಕರ ರಜೆ ಬೇಕೆಂದು ಹೇಳಿ. ಬೇಕಾದರೆ ನಾವುಗಳೆಲ್ಲರೂ ಕುಳಿತು ಅದಕ್ಕೆ ಪರಿಹಾರ ಸೂಚಿಸೋಣ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ನಮ್ಮ ಸರ್ಕಾರ ಯಾವುದೇ ಇದ್ದರೂ ಅವರ ಬಗ್ಗೆ ನಮಗೆ ಸಂಕಷ್ಟದಲ್ಲಿ ಸಿಲುಕಿಕೊಂಡಿಲ್ಲ. ತಮಗೆ ಜನರ ಬಗ್ಗೆ ಇಷ್ಟೊಂದು ಕಳಕಳಿ ಬಹಳಷ್ಟು ಕಳಕಳಿ ಇಲ್ಲಿದಿದ್ದರೂ ತಮ್ಮಷ್ಟಾದರೂ ಇದ್ದೇ ಇದೆ. ಅದಕ್ಕೂ ಇದಕ್ಕೂ ಹೊಂದಾಣಿಕೆ ಮಾಡಬೇಡಿ. ಮಾನ್ಯ ಸದಸ್ಯರಾದ ಶ್ರೀ ಮಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಹೇಳಿದರು. ಪ್ರಶ್ನೆಯೇನೆಂದರೆ, ವರ್ಷದಲ್ಲಿ ನೂರು ದಿವಸಗಳ ಕಾಲ ಸದನವನ್ನು ನಡೆಸುವುದರ ಬಗ್ಗೆ ನಮ್ಮ ಸರ್ಕಾರ ಹಿಂದೆ ಭರವಸೆ ಕೊಟ್ಟಿತ್ತು, ಅದಕ್ಕೆ ಬದ್ಧರಾಗಿದ್ದೇವೆಯೇ? ಇಲ್ಲವೇ? ಎಂಬುದು. ನಾವು ಫೈನಾನ್‌ಷಿಯಲ್ ಇಯರ್‌ಗೆ 100 ದಿವಸ ಎಂದು ಹೇಳಿದ್ದು, ಅಕಡೆಮಿಕ್ ಇಯರ್‌ಗೆ ಅಲ್ಲ. ತಮ್ಮ ಗಮನಕ್ಕೆ ತರುವುದಿದ್ದರೆ ಈ ಫೈನಾನ್‌ಷಿಯಲ್ ಇಯರ್‌ನಲ್ಲಿ ಇವತ್ತು ಸೇರಿ 46 ದಿವಸಗಳವರೆಗೆ ಸದನವನ್ನು ನಡೆಸಲಾಗಿದೆ. ನೂರು ದಿವಸಗಳ ಸದನ ನಡೆಸುವುದಕ್ಕೆ ಕಾಲಾವಧಿಯನ್ನು ವಿಸ್ತರಿಸಬಹುದು. ಇದಕ್ಕೆ ನಮ್ಮದ್ದೇನೂ ಅಡ್ಡಿ ಇಲ್ಲ. ಮಾರ್ಚಿ ಅಂತ್ಯದೊಳಗಾಗಿ ಒಟ್ಟು ನೂರು ದಿವಸಗಳ ಅಧಿವೇಶನ ನಡೆಸುವುದಕ್ಕೆ ನಾವು ಸಿದ್ಧರಿದ್ದೇವೆ, ನೀವೂ ಸಿದ್ಧರಿದ್ದೀರಿ. ಆದುದರಿಂದ, ನಾನು ವಚನಭ್ರಷ್ಟವಾಗತಕ್ಕಂಥಾದ್ದಲ್ಲ ಈಗಾಗಲೇ 46 ದಿವಸಗಳ ಕಾಲ ಸದನವನ್ನು ನಡೆಸಿದ್ದೇವೆ. ಬೇಕಾದರೆ, ವಿಧಾನಸಭೆಯ ಅಧಿವೇಶನ ಯಾವ ಯಾವ ವರ್ಷ ಎಷ್ಟೆಷ್ಟು ದಿವಸಗಳು ನಡೆದಿದೆಯೆಂಬುದನ್ನು ಲೆಕ್ಕ ಮಾಡಿ ನೋಡಿ. ವಿಧಾನಸಭೆಯ ಅಧಿವೇಶನವನ್ನು ನಾವು ಹೆಚ್ಚು ದಿವಸ ನಡೆಸಿದ್ದೇವೆ. ಆದುದರಿಂದ, ಮಾರ್ಚಿ ಅಂತ್ಯದೊಳಗೆ ನೂರು ದಿವಸ ಸದನ ನಡೆಸಬೇಕಾದರೆ ನಡೆಸೋಣ ಅದಕ್ಕೆ ಏನೂ ಅಡ್ಡಿ ಇಲ್ಲ.

ಮಾನ್ಯ ಉಪ ನಾಯಕರಾದ ಕೃಷ್ಣರವರು ಏನು ಹೇಳಿದ್ದಾರೆಂದರೆ, ಅನೇಕ ಮಾನ್ಯ ಸದಸ್ಯರು ಬಂದು ನಿನ್ನೆ ಗ್ರಾಮಪಂಚಾಯಿತಿಯ ಚುನಾವಣೆಯಾಗಿದೆ, ಇವತ್ತು ಮತಗಳ ಎಣಿಕೆ ನಡೆಯುತ್ತಿದೆ, ನಾಡಿದ್ದು ರಜೆ ಇದೆ, ಆದ್ದರಿಂದ ನಮಗೆ ಸ್ವಲ್ಪ ಅನುಕೂಲ ಮಾಡಿಕೊಡಬೇಕೆಂದು ಕೇಳಿದ್ದಾರೆಂದು ಹೇಳಿದ್ದಾರೆ. ಆದರೂ ಸಹ ಸದನದ

ಅಭಿಪ್ರಾಯವೇನಿದೆ ಆ ರೀತಿ ಮಾಡಿ. ನಾವು ನಮ್ಮ ವೈಯಕ್ತಿಕ ನಿಲುವಿನ ಮೇಲೆ ನಾಳೆ ಸದನವನ್ನು ಕರೆಯಬೇಕೆಂದು ಹೇಳಿಯೇ ಕರೆದಿದ್ದು. ಆದುದರಿಂದ ನಾಳೆ ಸದನವನ್ನು ಕರೆಯುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಮಾನ್ಯ ಸಭಾಧ್ಯಕ್ಷರು ಸದನದ ಸದಸ್ಯರುಗಳ ಅಭಿಪ್ರಾಯದ ಪ್ರಕಾರ ಹೋಗಬೇಕಾಗುತ್ತದೆ. ಸದಸ್ಯರ ಅನುಕೂಲಕ್ಕಾಗಿ ತಾವು ಬೇಕಾದರೆ ಸಭೆಯನ್ನು ಅಡ್‌ಜರ್ನ್ ಮಾಡಿ. ಇಲ್ಲದಿದ್ದರೆ We can have a sitting I have no objection.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಸರ್ವೇ ಸಾಮಾನ್ಯವಾದ ಅಭಿಪ್ರಾಯದಂತೆ ನಾಳೆ ಅಧಿವೇಶನವನ್ನು ನಡೆಸಬೇಕೆಂದಿದೆ. ಇದರ ಮುಖ್ಯವಾದ ಉದ್ದೇಶವೇನೆಂದರೆ, ಆದಷ್ಟು ಮಟ್ಟಿಗೆ ನಾವು ನೂರು ದಿನಗಳ ಕಾಲ ಅಧಿವೇಶನ ಕುಳಿತುಕೊಳ್ಳಬೇಕು ಮತ್ತು ಬಹಳ ಮುಖ್ಯವಾದ ವಿಚಾರಗಳು ಚರ್ಚೆಯಾಗಬೇಕಾಗಿದೆ. ಮಾನ್ಯ ಸದಸ್ಯರ ಅಭಿಪ್ರಾಯ ಆ ರೀತಿ ಇದ್ದರೂ ಸಹ ನಾಳೆ ಅಧಿವೇಶನ ಇದ್ದರೆ ಒಳ್ಳೆಯದು.

(ಗೊಂದಲ)

ಶ್ರೀ ಜಿ. ರಾಜುಗೌಡ : ಸಭೆಯನ್ನು ದಯಮಾಡಿ ಸೋಮವಾರದವರೆಗೆ ಮುಂದೂಡಬೇಕು.

(ಗೊಂದಲ)

ಅಧ್ಯಕ್ಷರು : ತಾವುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿಬಿಟ್ಟರೆ, ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

(ಬಹಳಷ್ಟು ಮಾನ್ಯ ಸದಸ್ಯರುಗಳು ಸೋಮವಾರದವರೆಗೆ ಸಭೆಯನ್ನು ಮುಂದೂಡಬೇಕೆಂದು ಒತ್ತಾಯ ಮಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸಂಚನ್ನು ನಡೆಸಿ, ಸದಸ್ಯರು ಚರ್ಚೆ ನಡೆಸಬೇಕೆಂದು ಇದ್ದರೂ ಸಹ, ಇಂಥ ಒಂದು ನಾಟಕೀಯ ತಂತ್ರವೇನಿದೆ, ಅದನ್ನು ವಿರೋಧಿಸಿ ನಾವು ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಸಭೆಯ ಕಾರ್ಯಕಲಾಪಗಳನ್ನು ಸೋಮವಾರದವರೆಗೆ ಮುಂದೂಡಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ಪುನಃ ಸಭೆಯು ಸಮಾವೇಶಗೊಳ್ಳುತ್ತದೆ.

(ಸದನವು 12 ಗಂಟೆ 14 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 3ನೇ ಜನವರಿ 1994ರ ಸೋಮವಾರದಂದು 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)